1

# ಯೇಸುವಿನ ಬಗ್ಗೆ ನಾವು ಏನನ್ನಾದರು "ಅರಿಯಬಹುದೇ?"

ನಾವು ಯೇಸುವಿನ ಕುರಿತು "*ಏನನ್ನಾದರೂ* ಅರಿಯಬಹುದೇ ಎಂಬ ಪ್ರಶ್ನೆಯನ್ನು ನಾವುಗಳು ಕೇಳಬಹುದೇ?"; "ಯೇಸುವಿನ ಕುರಿತಾದ ಒಂದು ವಿವರಣೆಯು, ಇನ್ನೊಂದು ವಿವರಣೆಗಿಂತ ಭಿನ್ನವೇ?" ಈ ಕುರಿತಾದ ವಿವರಣೆಯನ್ನು ಸ್ಪಷ್ಟಪಡಿಸಿ ಕೊಳ್ಳೋಣ. "*ಚರಿತ್ರೆಯಿಂದ* ಯೇಸುವಿನ ಕುರಿತಾಗಿ ಅರಿಯಬಹುದೇ?"; "ಎಂಬುದಾಗಿ ನಾವು ಕೇಳುತ್ತಿದ್ದೇವೆ? ನಮ್ಮ ಸಹಾಯಕ್ಕಾಗಿ ಯಾವ ಅಂಶಗಳನ್ನು ನಾವುಗಳು ಗಮನಿಸಬಹುದು?"

## ಆತನ ಕುರಿತಾದ ಸತ್ಯವನ್ನು ಹೇಗೆ ಗುರುತಿಸಬಹುದಾಗಿದೆ

ನಂಬಬಹುದಾದ ಸತ್ಯಾಂಶಗಳು ಇಲ್ಲದೆ ಇರುವದರಿಂದ ಅದರ ಕುರಿತು ಏನನ್ನು ಸಹ "ಗುರುತಿಸಲಾಗದು" ಎಂದು ಕೆಲವು ನಾಸ್ತಿಕರು ಹೇಳುತ್ತಾರೆ: ಆತನ ಕುರಿತಾದ ನಂಬಬಹುದಾದ ಸತ್ಯಾಂಶಗಳು ಇರುವದರಿಂದ ಅವುಗಳನ್ನು "ಗುರುತಿಸಬಹುದು" ಎಂದು ನಾನು ಮೊದಲನೆಯದಾಗಿ ಪ್ರತಿಪಾದಿಸುತ್ತೇನೆ.

ಸತ್ಯಾಂಶಗಳ ಕುರಿತು ನಂಬಬಹುದಾದ-ಸಂಗತಿಗಳಿವೆ ಎಂದು ಹೇಳುವಾಗ ಅದು ಸಾರ್ವತ್ರಿಕವಾದ ಸತ್ಯವಾಗಿರುವದಿಂದ-ಅದನ್ನು ಮೂರು ವಿಧವಾಗಿ ಅರಿಬಹುದಾಗಿದೆ:

(1) *ಸತ್ಯ ಅಥವಾ ಸತ್ಯಾಂಶವೆಂಬದು ವೈಯಕ್ತಿಕವಾದ ಗ್ರಹಿಕೆಗೆ ನಿಲುಕದ ಸಂಗತಿಯಾಗಿರುತ್ತದೆ,* ಇನ್ನೊಂದು ಅರ್ಥದಲ್ಲಿ ಸತ್ಯವು ಸತ್ಯವೇ ಆಗಿರುತ್ತದೆ, ಅದನ್ನು ನೀನು ಗ್ರಹಿಸದೆ ಹೋದರೂ, ಅದು ಸತ್ಯವೇ ಆಗಿರುತ್ತದೆ. ಉದಾಹರಣೆಗೆ ಜುಲೈ 20, 1969ರಲ್ಲಿ, ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ನಡೆದನು, ನವೀನ ತಾಂತ್ರಿಕತೆಯ ಕಾರಣದಿಂದಈ ಸಾಧನೆಯನ್ನು ಮಾಡಿದ್ದರಿಂದ, ಲೋಕದವರೆಲ್ಲರೂ ಉತ್ಸಾಹಗೊಂಡರು. ಇದು ಸತ್ಯಾಂಶವಾಗಿದ್ದರೂ; ಕೆಲವರು ಆ ಸಂಗತಿಯನ್ನು ನಂಬುವದಿಲ್ಲ. 1976ನೇ ಇಸವಿಯ ಆರಂಭದಲ್ಲಿ ಇದು ಕಟ್ಟು ಕಥೆಯೆಂದು ಅನೇಕ ಪುಸ್ತಕಗಳು ಬರೆಯಲ್ಪಟ್ಟವು. ಚಂದ್ರನ ಮೇಲೆ ನಡೆಯುವದು ವೈಜ್ಞಾನಿಕವಾಗಿ ಅಸಾಧ್ಯ, ಚಂದ್ರನ ಮೇಲೆ ನಡೆಯುತ್ತಿರುವ ಛಾಯ ಚಿತ್ರಗಳು, ಎಂದು ತಿಳಿದು, ಆ ಗಗನ ಯಾತ್ರಿಗಳು ಸತ್ಯವನ್ನು ಹೇಳಿಬಿಡುವರು ಎಂದು ಅವರಲ್ಲಿ ಕೆಲವರನ್ನು ಕೊಂದು ಹಾಕಿರಬಹುದು. ಈ ವಿದಧ ಆಲೋಚನೆಗಳನ್ನೇ ಹೊಂದಿರುವಂಥ ಒಂದು ಸಮೂಹವು, ಚಂದ್ರನ ಕುರಿತಾದ ಸಂಗತಿಗಳು ಸುಳ್ಳುಗಳಾಗಿದ್ದು, ಅವುಗಳನ್ನು ಅಮೇರಿಕೆ ಸರ್ಕಾರದವರು ಬಹಳ ತಿಳುವಳಿಕೆಯಿಂದ ತಿರುಚಿ ಹಾಕಿರುವರು ಎಂಬ ಪ್ರತೀತಿ ಇದೆ.

ಆರ್ಮ್‌ಸ್ಟ್ರಾಂಗನು ಚಂದ್ರನ ಮೇಲೆ ನಡೆದನು ಅಥವಾ ನಡೆಯಲಿಲ್ಲ. ಎಂಬ ವಾಗ್ವಾದವನ್ನು ನಾವುಗಳು ಮಾಡುತ್ತಿರುವದಿಲ್ಲ - ಒಂದು ವೇಳೆ ಅವನು ಅದರ ಮೇಲೆ ನಡೆದಿದ್ದರೆ - ಈ ಜನರು ಯಾವುದೇ ಊಹೆಗಳನ್ನು ಮಾಡಿದರೂ, ಅವನು ನಡೆದಿರುವ ಸಂಗತಿ ಸತ್ಯಾಂಶವೇ ಆಗಿರುತ್ತದೆ - ನಮ್ಮಲ್ಲಿ ನಾವುಗಳು ಇದರ ಕುರಿತು ಏನೇ ಆಲೋಚಿಸಿದರೂ -

ಅರ್ಥ ಸಭವಿಸಲೇ ಇಲ್ಲ ಎಂಬ ವರದಿಯನ್ನು ಕೇಳಿದರು ಸಹ, ಆ ಸಂಗತಿಯು ಸತ್ಯಾಂಶ ವಾಗಿಯೇ ಉಳಿದಿರುತ್ತದೆ.

(2) *ಸತ್ಯ ಅಥವಾ ನಿಜಾಂಶಗಳು ಸಾಕ್ಷ್ಯಾಧಾರಗಳಿಂದ ಊರ್ಜಿತಗೊಳ್ಳು ತ್ತದೆ.* ನಡೆದಿರುವ ಸಂಗತಿಯು ನಿಜಾಂಶವಾಗಿದ್ದರೆ, ಅದನ್ನು ಪ್ರತಿಪಾದಿಸುವವರು ಸಾಕ್ಷ್ಯಾಧಾರಗಳನ್ನು ನೀಡಬೇಕು. ಅದು ಕಣ್ಣಾರೆ ಕಂಡಿರುವ ಸಾಕ್ಷಿ ದಾಖಲೆಗಳು ಅಥವಾ, ಅದರ ಸಾಧ್ಯತೆಗಳ ಚರ್ಚೆಯನ್ನು ಮಂಡಿಸಬೇಕಾಗುತ್ತದೆ. ಆ ಸಾಕ್ಷ್ಯಾಧಾರಗಳು ಒಬ್ಬನನ್ನು ಒತ್ತಾಯ ಪೂರ್ವಕವಾಗಿ ಒಪ್ಪಿಕೊಳ್ಳುವಂತೆ ಮಾಡಬೇಕು ಎಂಬ ನಿಯಮವಿರುವದಿಲ್ಲ, ಆದರೆ ಸಾಕ್ಷಿಗಳು ಸತ್ಯಾಂಶಗಳಿಗೆ ಬೆನ್ನೆಲುಬಾಗಿರುತ್ತದೆ. ಆರ್ಮ್‌ಸ್ಟ್ರಾಂಗನು ಚಂದ್ರನ ಮೇಲೆ ನಡೆದನು ಎಂಬುದಕ್ಕೆ ದಾಖಲೆಗಳಿವೆ, ಅದರ ಚಿತ್ರಿಕರಣದ ಸಾಕ್ಷಿಗಳಿವೆ, ಆ ಯೋಜನೆಯಲ್ಲಿ ಕಾರ್ಯನಿರ್ವಹಿಸಿದವರ ಸಾಕ್ಷಿಗಳಿವೆ. ಸ್ವಾಭಾವಿಕವಾಗಿ ಅವರ ಸಾಕ್ಷಿಗಳು ಪರೀಕ್ಷೆಗೆ ಒಳಪಡಬೇಕು, ಅದರ ಪರಿಶೀಲನೆ ಅಗತ್ಯವು ಎಂಬ ಚರ್ಚೆಯೇ, ಅದು ಸತ್ಯವಿರಬಹುದು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ.

(3) *ಸತ್ಯಕ್ಕೆ ವಿರೋಧವಾದ ಸೂಚನೆಗಳು ಸುಳ್ಳಾಗಿರುತ್ತವೆ. ಸತ್ಯ ವಿರೋಧವಾದ ಎರಡು ಸಂಗತಿಗಳು ಸತ್ಯವಾಗಿರುವದಿಲ್ಲ.* ಚರಿತ್ರೆಯ ಹಿನ್ನೆಲೆ ಇರುವಾಗ ಸತ್ಯ ಸತ್ಯವಾಗಿಯೇ ಇರುತ್ತದೆ. ಆರ್ಮ್‌ಸ್ಟ್ರಾಂಗನು ಚಂದ್ರನ ಮೇಲೆ ನಡೆದಿರುವದು ಸತ್ಯವಾಗಿರುವಾಗ, ಅದನ್ನು ಸತ್ಯವಲ್ಲವೆಂದು ತಳ್ಳಿ ಹಾಕುವದು ಸುಳ್ಳಾಗಿರುತ್ತದೆ. ಒಂದು ವೇಳೆ ಅವನು ಚಂದ್ರನ ಮೇಲೆ ನಡೆದಿಲ್ಲದಿದ್ದರೆ, ಅವನು ನಡೆದನು ಎಂದು ಪ್ರತಿಪಾದಿಸುವದು ಸುಳ್ಳಾಗಿರುತ್ತದೆ. ಅವನು ಮಾಡಿದನು ಹಾಗೂ ಮಾಡಲಿಲ್ಲ ಎಂಬ ಎರಡು ಅಂಶಗಳನ್ನು ಪ್ರತಿಪಾದಿಸುವದು ಕಷ್ಟಕರ ವಾಗುತ್ತದೆ.

ಈಗ ಇವುಗಳಿಗೂ ಹಾಗೂ ಯೇಸುವಿಗೂ ಇರುವ ಸಂಬಂಧವಾದರೂ ಏನು? ಆ ಹೆಸರಿನ ವ್ಯಕ್ತಿಯಿದ್ದ, ಅಥವಾ ಇರಲಿಲ್ಲ ಎಂಬ ಸಂಬಂಧವಾಗಿದೆ ಸಾಕ್ಷಿಯು ಅವನು ಇದ್ದಂತ ವಾಸ್ತವಿಕತೆಯ ವಿಚಾರವನ್ನು ಸಾಭೀತುಪಡಿಸಿರಬಹುದು ಅಥವಾ ಸಾಭೀತು ಪಡಿಸದೆ ಇರಬಹುದು. ಯೇಸುವಿನ ಕುರಿತಾದ ವಿರೋಧಗಳು ಸತ್ಯವಾಗಿರುವದಿಲ್ಲ. ಅನೇಕ ಸಂಗತಿಗಳು ಯೇಸುವಿನ ವಾಸ್ತವಾಂಶದ ಕುರಿತು ಸಾಭೀತುಪಡಿಸಿದರೂ, ಅವುಗಳಲ್ಲಿ ಕೆಲವು ತೀವ್ರವಾದವಾಗಿರಬಹುದು; ಆದರೆ ಯೇಸುವಿನ ಕುರಿತಾದ ವಿರೋಧ ಚರ್ಚೆಯಲ್ಲಿ ಒಂದೆರಡು ತಪ್ಪುಗಳಿರಬಹುದು.[1]

## ಆತನ ಕುರಿತಾದ ಐತಿಹಾಸಿಕ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಬಹುದಾಗಿದೆ

ಯೇಸುವಿನ ಕುರಿತಾಗಿ ಅರಿಯಬೇಕಾದರೆ, *ಐತಿಹಾಸಿಕ* ಪ್ರಶ್ನೆಗಳನ್ನು ಕೇಳ ಬೇಕು. ನಮ್ಮ ಭಾವೋದ್ವೇಗ, ಯೋಚಿಸುವ, ಆಲೋಚನೆಗಳಂತೆ ಅಥವಾ ಇತರರು ಹೇಳಿರುವ ಸಂಗತಿಗಳ ಮೇಲೆ ಅವಲಂಭಿಸಲಾರದು. ನಾವು ಸಾಕ್ಷ್ಯಾಧಾರಗಳನ್ನು ಗಮನಿಸಬೇಕು.

"ಐತಿಹಾಸಿಕ ಸಾಕ್ಷಿಗಳನ್ನು ಪರಿಶೀಲಿಸಬಾರದೆ?" ಎಂಬ ಪ್ರಶ್ನೆಯನ್ನು ಒಬ್ಬನು ಕೇಳಬಹುದು. ಹೌದು ಸಕಲ ಸಾಕ್ಷಿಗಳನ್ನು ನಾವುಗಳು ಪರಿಶೀಲಿಸಬಹುದು! ಅವುಗಳನ್ನು ಪರಿಶೀಲಿಸುವಂತೆ ಅನೇಕ ಕಾರಣಗಳಿವೆ. ಸಾಕ್ಷ್ಯಾಧಾರಗಳು ಸತ್ಯಾಂಶಗಳನ್ನು ನಿರೂಪಿಸಿದರು, ಅವುಗಳನ್ನು ನಾವುಗಳು ಅರ್ಥಮಾಡಿಕೊಳ್ಳುವಂಥ ತಿಳುವಳಿಕೆ ಇಲ್ಲದಿದ್ದರೆ, "ಯೇಸುವಿನ ಬಗ್ಗೆ ನಾವು ಏನನ್ನೂ ಅರಿಯಲು ಸಾಧ್ಯವಾಗುವದಿಲ್ಲ." ಅದು ಜಾಣತನದ ಸೋಮಾರಿತನ ಹಾಗೂ ಅಪನಂಬಿಗಸ್ತಿಕೆಯಾಗಿರುತ್ತದೆ!

ಸಾಕ್ಷಿಗಳು ನಮ್ಮ ನಿರ್ಧಿಷ್ಟವಾದ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತವೆಯೇ ಭಿನ್ನಾಭಿಪ್ರಾಯಕ್ಕೆ ಅವಕಾಶ ಇದೆಯೇ? ಯೇಸುವನ್ನರಿಯುವದಕ್ಕೆ ಸಹಾಯ ಮಾಡುವ ಐತಿಹಾಸಿಕ ಸಾಕ್ಷ್ಯಾಧಾರಗಳು, ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾರವು.

ಅದೇ ರೀತಿಯಲ್ಲಿ ಐತಿಹಾಸಿಕ ಪ್ರಶ್ನೆಗಳು, ನಡೆದಂಥ ಸಕಲ ಘಟನಾವಳಿಗಳ ಕುರಿತಾದ ಸಂಗತಿಗಳಲ್ಲಿನ ಸಂದೇಶಗಳನ್ನು ನಿವಾರಣೆ ಮಾಡಲಾರವು. ಚರಿತ್ರೆಯು ಸತ್ಯದ ಸಾಧ್ಯತೆಗಳನ್ನು ಸಾಭೀತು ಪಡಿಸುತ್ತದೆ. ನಡೆದು ಹೋದ ವಿಚಾರಗಳನ್ನು ಸಾಕ್ಷ್ಯಾಧಾರಗಳು ದೃಢೀಕರಿಸುತ್ತವೆ. ಯೇಸುವಿನ ವಿಚಾರದಲ್ಲಿ, "ಯೇಸು ಭಾರತ ದೇಶಕ್ಕೆ ಹೋಗಿ, ಪೂರ್ವ ದೇಶದ ರಹಸ್ಯಗಳನ್ನು ಕಲಿತುಕೊಂಡನೇ?" ಯೇಸು ಮದುವೆ ಮಾಡಿಕೊಂಡು, ಮಕ್ಕಳನ್ನು ಪಡೆದನೇ ಎಂಬ ಪ್ರಶ್ನೆಯನ್ನು ಜನರು ಆಗಾಗ್ಗೆ ಕೇಳುತ್ತಾರೆ. "ಚಾರಿತ್ರಿಕ ಇತಿಹಾಸದ ಪ್ರಕಾರ, ಅದು ಸಾಧ್ಯವಿರಬಹುದು ಎಂದು ಹೇಳಬಹುದು. ಆದರೆ, ಆತನು ಈ ಸಂಗತಿಗಳನ್ನು ಮಾಡಿದನೇ?"; "ಈ ಕೃತ್ಯಗಳನ್ನು ಸಾಭೀತುಪಡಿಸಲು *ಸಾಕ್ಷ್ಯಾಧಾರಗಳು* ಇವೆಯೇ?" ಅಥವಾ ಸಂದೇಹದ ಊಹೆಗಳೇ? ಖಂಡಿತವಾಗಿಯೂ ಈ ರೀತಿ ಆಗಿರುವದಿಲ್ಲ.

ಇತಿಹಾಸದಲ್ಲಿನ ಘಟನಾವಳಿಗಳ ಕೊರತೆಗಳು, ಯೇಸುವಿನ ಕುರಿತ ಸತ್ಯಾಂಶಗಳನ್ನು ಅರಿಯಲು ಅಡಚಣೆಯಾಗುತ್ತದೆ. ಐತಿಹಾಸಿಕವಾದ ಯೇಸುವನ್ನು ನೀವುಗಳು ಅರಿಯಬೇಕೆಂಬ ಉತ್ತೇಜನವನ್ನು ನಿಮಗೆ ನೀಡಿ, ನಿಮ್ಮದೇ ಆದಂತ ಯೋಚನೆಗಳನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡಬಾರದೆಂದು ಪ್ರೋತ್ಸಾಹ ನೀಡಲಾಗಿದೆ.

## ಸತ್ಯವೇದದಲ್ಲಿರುವ ಐತಿಹಾಸಿಕ ಸಾಕ್ಷ್ಯಾಧಾರಗಳನ್ನು ಒಪ್ಪಿಕೊಳ್ಳಬಹುದಾಗಿದೆ

ಈ ಚರ್ಚೆಯಲ್ಲಿ ನಂಬಿಕೆಯು ಎಲ್ಲಿ ಉದ್ಭವಿಸುತ್ತದೆ ಎಂಬ ಪ್ರಶ್ನೆಯನ್ನು ಕ್ರೈಸ್ತರಾದ ನೀವುಗಳು ಆಶ್ಚರ್ಯಭರಿತವಾಗಿ ಕೇಳಬಹುದು. ನಾನು ಸಹ ಕ್ರೈಸ್ತನಾಗಿದ್ದು ಇಂತಹ ಪ್ರಶ್ನೆಗಳನ್ನು ಚರ್ಚಿಸಿರುವದರಿಂದ, ಈ ಮುಂದಿನ ಸಲಹೆ ಸೂಚನೆಗಳನ್ನು ನೀಡಲು ಅವಕಾಶವನ್ನು ಕೇಳುತ್ತಿದ್ದೇನೆ:

(1) *ಐತಿಹಾಸಿಕ ಘಟನಾವಳಿಗಳಿಗೆ ಭಯಪಡದಂತೆ ನಂಬಿಕೆಯು ನಡೆಸುತ್ತದೆ.* ವಾಸ್ತವಾಂಶವನ್ನು ಅರಿಯಲು ಸತ್ಯವನ್ನು ನಾವುಗಳು ಅರಿಯಬೇಕಾಗುತ್ತದೆ. ನಿಮ್ಮ ಬಗ್ಗೆ ನಾನು ಏನನ್ನೂ ಅರಿಯೆನು, ಆದರೆ ಯೇಸುವಿನ ಕುರಿತು ತಪ್ಪಾಭಿಪ್ರಾಯ ಗಳು ಎಷ್ಟೇ ಆಕರ್ಷಿತವಾಗಿದ್ದರೂ, ನಾನು ಅದನ್ನು ನಂಬುವದಿಲ್ಲ. ನಾನು ಯೊಚನೆ ಮಾಡಿದಂಥವುಗಳನ್ನು ಚಾರಿತ್ರಿಕ ಸಂಗತಿಗಳು ಅಲ್ಲಗಳೆಯುವದಾದರೆ, ನಾನು ಅದನ್ನು ಒಪ್ಪಿಕೊಳ್ಳಲೇಬೇಕು. ಊಹೆಗಳನ್ನು ಹೊರತುಪಡಿಸಿ, ಸತ್ಯವನ್ನು ಅರಿಯುವಾಗ ನನ್ನ ನಂಬಿಕೆಯು ಭಲಗೊಳ್ಳುತ್ತದೆ.

(2) *ಸತ್ಯವೇದದ ನಂಬಿಕೆಯು ಚರಿತ್ರೆಯಲ್ಲಿ ಬೇರು ಬಿಟ್ಟಿರುತ್ತದೆ.* ಹಳೆ ಒಡಂಬಡಿಕೆಯಲ್ಲಿ, ಇಸ್ರಾಯೇಲ್ ಜನರು ಐಗುಪ್ತದ ದಾಸತ್ವದಿಂದ ಬಿಡುಗಡೆ ಹೊಂದಿದ ದೇವ ಜನರಾಗಿ ಸ್ಥಾಪನೆ ಮಾಡಿಕೊಂಡಿದ್ದರು. ಅವರಿಗೆ ಸಂಭವಿಸಿದ ಘಟನೆಗಳಲ್ಲಿ, ಅವರ ನಂಬಿಕೆಯ ಬೇರನ್ನು ನೋಡುತ್ತೇವೆ. ಅಪೊಸ್ತಲರು ಸಹ ಯೇಸುವಿನ ಕುರಿತಾಗಿ ಭಾವೋದ್ವೇಗದಿಂದ, ಒಂದು ಧಾರ್ಮಿಕ ಸಂದೇಶವನ್ನು ಸಾರದೆ, ಸಮಯಕ್ಕನುಗುಣವಾಗಿ, ಜೀವಿಸಿ ಮರಣವನ್ನು ಹೊಂದಿ, ಜೀವದಿಂದ ಎದ್ದು ಬಂದಿದ್ದ ಯೇಸುವನ್ನೇ ಪ್ರಚಾರಮಾಡಿದ್ದರು. ಒಬ್ಬ ವಿಶ್ವಾಸಿಯ ಜೀವಿತದಲ್ಲಿ ಜರುಗಿರುವ ಘಟನೆಗಳಲ್ಲಿ ನಂಬಿಕೆಯಿರಿಸಿ, ಅದರಿಂದ ಮಾಹಿತಿ ಪಡೆದು ವೃದ್ಧಿಗೊಳ್ಳುವನು.

(3) *ಚರಿತ್ರೆ ಹಾಗೂ ನಂಬಿಕೆ ಸಹಕಾರದ ಕುರಿತು ಸತ್ಯವೇದವು ಪ್ರತಿಪಾದಿಸುತ್ತದೆ.* ಸತ್ಯವೇದದ ಬರಹಗಾರರು ಕೇವಲ ಸಹಜವಾದ ಘಟನೆಗಳನ್ನು ಮಾತ್ರ ಬರೆಯಲಿಲ್ಲ. ಆ ನಡೆದ ಘಟನೆಗಳ ಅನುವಾದವನ್ನು ಮಾಡಿ, ಅದರಿಂದ ವಿಶ್ವಾಸಿಗಳ ಮೇಲೆ ಉಂಟಾದ ಪ್ರಭಾವವನ್ನು ಪ್ರತಿಬಿಂಬಿಸಿದರು. ಹೊಸ ಒಡಂಬಡಿಕೆಯಲ್ಲಿನ ಸುವಾರ್ತೆಗಳ ಮೂಲಕವಾಗಿ, ಅದು ಕೇವಲ ಯೇಸುವಿನ ಕಥೆಯನ್ನು ಹೇಳದೆ, ಅದನ್ನು ನಾವು ಹಿಂಬಾಲಿಸಲೇ ಬೇಕಾದ ವಿವರಣೆಯನ್ನು ಸಹ ನೀಡುತ್ತದೆ. ಇದಕ್ಕಾಗಿಯೇ ಅವುಗಳು ಬರೆಯಲ್ಪಟ್ಟವು ಎಂದು ಯೋಹಾನನ ಸುವಾರ್ತೆಯು

ಸ್ಪಷ್ಟಪಡಿಸುತ್ತದೆ (ಯೋಹಾನ 20:30, 31). ಯೇಸುವಿನ ಕುರಿತಾದ ವಿವರಣೆಗಳನ್ನು ನಾವು ಕೇಳುವಾಗ, ಚರಿತ್ರೆ ಹಾಗೂ ನಂಬಿಕೆಯ ಸಹಕಾಶವನ್ನು ನಾವು ಗಮನಿಸಿ ಪೂರ್ಣವಾಗಿ ಒಪ್ಪಿಕೊಳ್ಳಬಹುದಾಗಿದೆ. ಅವೆರಡನ್ನು ಪ್ರತ್ಯೇಕ ಮಾಡುವದು ಅಸಾಧ್ಯವೆಂಬುದು ಇನ್ನೊಂದು ಅರ್ಥವಾಗಿದೆ. ಸಹಜವಾಗಿಯೇ ಇತರೆ ಇತಿಹಾಸಕಾರರು ಸಹ ತಮ್ಮ ಹೇಳಿಕೆಯ ಮೂಲಕ ನಂಬುವಂತೆ ಮಾಡುವವರಲ್ಲವೇ.

(4) *ಸಾಕ್ಷ್ಯಾಧಾರಗಳನ್ನು ನಂಬಿಕೆಯ ಮೂಲಕವೇ ಒಪ್ಪಿಕೊಳ್ಳಲಾಗುತ್ತದೆ.* ಅಂದರೆ ಅದರ ಮೂಲವನ್ನು ನಂಬುವದೇ ಎಂಬ ಅರ್ಥವಾಗಿದೆ. ಉದಾಹರಣೆಗೆ, ನಮ್ಮಲ್ಲಿ ಕೆಲವರು, ಜೂಲಿಯಸ್ ಸೀಸರನು ಬದುಕಿದ್ದನು ಹಾಗೂ ಅವನು ಪ್ರಾಚೀನ ರೋಮ್ ಸಾಮ್ರಾಜ್ಯವನ್ನು ಆಳಿದನು ಎಂಬುದನ್ನು ಸಂದೇಹಿಸಬಹುದು. ನಾವು ಅವನನ್ನು ನೋಡಿರುವದಿಲ್ಲ ಹಾಗೂ ಸಂದಿಸಿರುವದಿಲ್ಲದೆ ಇರದಿದ್ದರು, ನಮ್ಮ ಬುದ್ಧಿಯಿಂದಲೂ ಬುದ್ಧಿ ಇಲ್ಲದೆಯೂ ಅದರಲ್ಲಿನ ಕೆಲವು ಅಂಶಗಳನ್ನು ಒಪ್ಪಿಕೊಂಡಿರುತ್ತೇವೆ. (ತಂದೆ ತಾಯಿಗಳಿಂದ, ಪುಸ್ತಕಗಳಿಂದ ಹಾಗೂ ಬೋಧಕರುಗಳಿಂದ) ಸತ್ಯವೇದದಲ್ಲೂ ಸಹ ಈ ವಿಚಾರವನ್ನೇ ಮುಂದುವರೆಸಲಾಗಿದೆ. ಸತ್ಯವೇದದಲ್ಲಿ ನಾವುಗಳು ಭರವಸವಿಟ್ಟಿದ್ದರೆ, ಅದರಲ್ಲಿರುವ ಯೇಸುವಿನ ವಿವರಣೆಯನ್ನು ನಂಬಿ, ಅದಲಿಂದ ಉತ್ತರವನ್ನು ಪಡೆಯಬಹುದು, ಇಲ್ಲದಿದ್ದಲ್ಲಿ ಉತ್ತರವನ್ನು ಪಡೆಯಲಾರೆವು ಒಂದು ವೇಳೆ, ಸತ್ಯವೇದದ ಮಾಹಿತಿಯು ನಿರಾಧಾರ ಎಂದು ತಿಳಿಯುವದಾದರೆ, ಅದರಲ್ಲಿರುವ ಯೇಸುವಿನ ಕುರಿತಾದ ಮಾಹಿತಿಯ ವಿಚಾರದಲ್ಲಿ ಸಂದೇಹಿಸುವವರಾಗಿದ್ದೇವೆ. ನಂತರ, ಆತನ ಕುರಿತಾದ ವಿವರಣೆಗಳನ್ನು ಇತರೆ ಮೂಲಗಳಿಂದ ತಿಳಿಯಬಹುದಾಗಿದೆ. ಸಾಧ್ಯತೆಗಳ ಕುರಿತಾಗಿ ಆಲೋಚಿಸಿರಿ. ಯೇಸು ಕ್ರಿಸ್ತನ ಮಾಹಿತಿಯನ್ನು ಸತ್ಯವೇದದ ಮೂಲದಿಂದ ಪಡೆಯಬಹುದು ಎಂದು ಮುಂದಿನ ಪಾಠದಲ್ಲಿ ಗಮನಿಸೋಣ.

ಯೇಸುವಿನ ಕುರಿತಾದ ವಿಚಾರಗಳನ್ನು ತಿಳಿಯಲು, ಅಪೇಕ್ಷೆಯ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಳ್ಳೋಣ. ವಿಶ್ವಾಸಿಯಾಗಿದ್ದರೂ, ಸರಿಯೇ ವಿಶ್ವಾಸಿಯಾಗದಿದ್ದರೂ ಸರಿಯೇ ಆ ಸಾಕ್ಷ್ಯಾಧಾರಗಳು ನಮ್ಮನ್ನು ಎಲ್ಲಿಗೆ ನಡೆಸುತ್ತವೆ ಎಂದು ಗಮನಿಸಿರಿ.

ಟಿಪ್ಪಣಿ

[1]ವಾಸ್ತವಿಕತೆಯ ಕುರಿತಾದ ಬಾಹ್ಯ ವಸ್ತುವಿನ ಭಾವಗಳು Norman L. Geisler, "Why I Believe Truth Is Real and Knowable" in H. L. Geisler and P. K. Hoffman, eds., *Why I Am a Christian: Leading Thinkers Explain Why They Believe,* rev. and exp. ed. (Grand Rapids, Mich.: Baker Books, 2006), 33-52.

## "ಯೇಸುವಿನ ಕುರಿತಾದ ಪ್ರೇರಣಾ ಶಿಬಿರ ಅಂದರೇನು?"

ಯೇಸುವಿನ ಕುರಿತಾದ ಪ್ರೇರಣ ಶಿಬಿರವು ಸುಮಾರು ಎರಡು ನೂರು ಜನರನ್ನು ಒಳಗೊಂಡಿರುತ್ತದೆ. ಅದರಲ್ಲಿ ಹೊಸ ಒಡಂಬಡಿಕೆಯ ಸುವಾರ್ತೆಗಳಲ್ಲಿರುವ ಐತಿಹಾಸಿಕ ಮೂಲಗಳ ಕುರಿತು ನಕಾರಾತ್ಮಕ ಧೋರಣೆಯನ್ನು ಹೊಂದಿರುವ ಅಮೇರಿಕೆಯ ಪಂಡಿತರುಗಳು ಒಳಗೊಂಡಿರುವರು. ಪ್ರೊಫೆಸರ್ ಫಂಕ್ ಹಾಗೂ ಅವರ ಸಂಗಡಿಗರು 1985ರಲ್ಲಿ, ಒಂದು ಸಮ್ಮೇಳನವನ್ನು ಮಾಡಿ, ಸುವಾರ್ತೆಗಳಲ್ಲಿನ ದೃಢತೆಗಳ ಬಗ್ಗೆ ಚರ್ಚಿಸಿದರು. ಅವರುಗಳು ಯೇಸುವಿನ ಕುರಿತಾದ ವಿಚಾರಗಳಿಗೆ ಒಮ್ಮತವನ್ನು ಸೂಚಿಸಿ, ಆತನು ಕೇವಲ ಶೇಕಡ 18ರಷ್ಟು ಮಾತ್ರ ಮಾತನಾಡಿರುವನು ಎಂಬ ನಿರ್ಣಯವನ್ನು ಕೈಗೊಂಡರು. ಆ ಐದು ಸುವಾರ್ತೆಗಳ ಕುರಿತು, 1993ರಲ್ಲಿ *The Search for the Authentic Word of Jesus.* ಎಂಬ ಪುಸ್ತಕವನ್ನು ಬರೆದರು. ನಂತರದಲ್ಲಿ (ಯೇಸುವಿನ

ಕೃತ್ಯಗಳು), ಅಂದರೆ ಯೇಸು ಏನು ಮಾಡಿದನು, ಎಂಬ ನಕಾರಾತ್ಮಕವಾದ ಸಂಗತಿಗಳನ್ನೇ ಆ ಪುಸ್ತಕದಲ್ಲಿ ದಾಖಲು ಮಾಡಿರುವರು.

ಯೇಸುವಿನ ಕುರಿತಾದ ಪ್ರೇರಣಾ ಶಿಭಿರದ ನಿರ್ಣಯಗಳ ಕುರಿತು ಸುದ್ಧಿ ಮಾದ್ಯಮಗಳಲ್ಲೂ ದೂರದರ್ಶನ ವಾಹಿನಿಯಲ್ಲೂ ಪ್ರಕಟಗೊಂಡವು. ಇದರ ಪರಿಣಾಮವಾಗಿ ಸುವಾರ್ತೆಗಳಲ್ಲಿರುವ ಯೇಸುವಿನ ಕುರಿತಾದ ಅಧ್ಯಯನವು ಅಧಿಕಗೊಂಡಿತು.

ಆ ಗುಂಪಿನ ಕುರಿತಾದ ನಕಾರಾತ್ಮಕವಾದ ವಿಮರ್ಶೆ ಈ ಕೆಳಕಂಡಂತಿದೆ:

- ಯೇಸು ಚರಿತ್ರಾ ವ್ಯಕ್ತಿ "ಕ್ರಿಸ್ತನ ನಂಬಿಕೆ" ಎರಡೂ ಒಂದೇ ಆಗಿರುತ್ತದೆ:
- ಯೇಸುವಿನ ಮಾತುಗಳು ಪ್ರಾಚೀನ ಯೆಹೂದ್ಯರಂತಿರದೆ, ಹೆನಿಸಮ್‌ರವರ ಪ್ರಕಾರವಿದೆ ಎಂಬ ಅದರ ವಾದಕ್ಕೆ, "ಯೇಸು ಮೊದಲ ಶತಮಾನದ ಯೆಹೂದ್ಯನು" ಎಂಬುದು ಖಚಿತವಾಗಿದೆ.
- ಅವರು ಮೂಲವಿಲ್ಲದ ಚರಿತ್ರೆಯ ಕ್ರಮವನ್ನು ಅನುಸರಿಸುತ್ತಾರೆ (ಹೊಸ ಒಡಂಬಡಿಕೆಯನ್ನು ಹೊರತುಪಡಿಸಿ, ತೋಮನ ಸುವಾರ್ತೆಯನ್ನು ಬಳಸಿರುವರು, ಅವರಿಗೆ ಅದು ಐದನೆಯ ಸುವಾರ್ತೆಯಾಗಿದೆ.)
- ಯೇಸುವಿನ ಮಾತುಗಳ ಕುರಿತ, "ಅಸಮಾನವಾದ ತತ್ವಗಳನ್ನು ಬಳಸಿರುವರು." ಯೇಸುವಿನ ಮಾತುಗಳು ಆದಿ ಯೆಹೂದ್ಯರ ಹಾಗೂ ಆದಿ ಸಭೆಯ ಮಾತುಗಳಂತ್ತಿತ್ತು ಎಂದು ನಂಬುತ್ತಾರೆ. ಆದ್ದರಿಂದ ಅದನ್ನು ನಿರಾಕರಿಸಬೇಕು, ಆತನ ಅನುಯಾಯಿಗಳೇ ಈ ಸಂಗತಿಗಳಲ್ಲಿ ಕೆಲವನ್ನು ಮಾತ್ರ ನಂಬಿದರು ಎಂಬದು ಅವರ ನಂಬಿಕೆ.
- ಯೇಸು ಮೆಸ್ಸಿಯನಾಗಲೀ ಅಥವಾ ದೇವರ ಮಗನಾಗಲೀ ಆಗಿರಲಿಲ್ಲ ಎಂಬುದು ಅವರ ವಾದ, ಈ ಕಥೆಯನ್ನು ಅಲೆಮಾರಿಯಾದ ಒಬ್ಬ ಪಂಡಿತನು ಹೇಳಿರುವನು ಎಂಬ ವಾದವಾಗಿದೆ. ಯೇಸುವಿನ ಶಿಲುಬೆಯ ಮರಣದ ಬಗ್ಗೆ ಸಂದೇಹ ವ್ಯಕ್ತಿಪಡಿಸಿರುವರು. ಆದರೆ ಹೊಸ ಒಡಂಬಡಿಕೆ ಹಾಗೂ ಅದರ ಹೊರತಾಗಿಯೂ ಪುರಾವೆಗಳಿವೆ.

ಈ ಮಂಡಳಿಯ ಯಾವದೇ ತತ್ವಗಳು ಗಮನಾರ್ಹವಾಗಿರುವದಿಲ್ಲ.